‘ಹಾಗಾದ್ರೆ ನಿನಗೆ ಈಗ ಕ್ವಾರಂಟೈನ್ ನರಕ ಅಲ್ಲವಾ, ಭಾಗು?’

‘ಸ್ವಾಮೀ ನೀವು ಬರಲ್ಲ ಅಂದ್ರಿ. ಬೇರೆ ದಾರಿ ಇರ್ಲಿಲ್ಲ. ಅಲ್ಲಿ ಡಾಕ್ಟರ ಸಹಾಯ ಆದ್ರೂ ಸಿಗುತ್ತೆ; ಜೊತೆಗೆ, ಬೇರೆ ರೋಗಿಗಳ ಜೊತೆ ನಾನು ಇವಳನ್ನೂ ನೋಡಿಕೊಳ್ಳಬಹುದು.’

‘ಇಲ್ಲಿಡು ಚಾಪೇನ! ಇಷ್ಟಾದ್ರೂ ಇನ್ನೂ ನಿನ್ ತಲೆಯಿಂದ ಬೇರೆ ರೋಗಿಗಳ ಚಿಂತೆ ಹೋಗಿಲ್ಲ, ದಡ್ಡ!’

ಚಾಪೆಯನ್ನು ಒಳಗೆ ಇಡಲಾಯಿತು. ನನ್ನ ಬಳಿಯಿದ್ದ ರಾಮಬಾಣದ ಔಷಧಿಯನ್ನು ನಾನು ಭಾಗುವಿನ ಹೆಂಡತಿಗೆ ಕುಡಿಯಲು ಕೊಟ್ಟೆ; ನಂತರ ಅಗೋಚರ ಶಕ್ತಿಯ ಜೊತೆ ಸೆಣಸಲು ಸಿದ್ಧನಾದೆ. ಭಾಗುವಿನ ಹೆಂಡತಿ ಕಣ್ಣು ತೆರೆದಳು. ಭಾಗು, ‘ಸ್ವಾಮೀ ನಿಮ್ಮ ಉಪಕಾರಾನ ನನ್ನ ಜೀವನದಲ್ಲಿ ಮರೆಯಲ್ಲ’ ಅಂದ.

ನಾನು ಹೇಳಿದೆ, ‘ನನಗೆ ನನ್ನ ಹಿಂದಿನ ವರ್ತನೆಯ ಬಗ್ಗೆ ಬಹಳ ವಿಷಾದವಿದೆ. ಭಾಗೂ! ನಿನ್ನ ಸೇವೆಗಳಿಗೆ ಪ್ರತಿಫಲವಾಗಿ ದೇವರು ನಿನ್ನ ಹೆಂಡತಿಯ ಪ್ರಾಣವನ್ನು ಉಡುಗೊರೆಯಾಗಿ ನೀಡಲಿ.’

ಅದೇ ಸಮಯದಲ್ಲಿ ನಾನು ಆ ಅಗೋಚರ ಶಕ್ತಿ ತನ್ನ ಕೊನೆಯ ಅಸ್ತ್ರವನ್ನು ಬಳಸುತ್ತಿರುವುದನ್ನು ನೋಡುತ್ತಿದ್ದೆ. ಭಾಗುವಿನ ಹೆಂಡತಿಯ ತುಟಿಗಳು ಬಿರಿಯಲಾರಂಭಿಸಿದವು. ನನ್ನ ಕೈಯಲ್ಲಿದ್ದ ಆಕೆಯ ನಾಡಿ ನಿಧಾನವಾಗಿ ಮೌನವಾಗುತ್ತಿತ್ತು. ನನ್ನ ಎಲ್ಲಾ ಪ್ರಯತ್ನಗಳೂ ಸೋಲುತ್ತಿದ್ದವು. ನನ್ನ ಕೈಗಳು ಬರಿದಾದವು. ನಾನು ನಾಚಿಕೆಯಿಂದ ತಲೆತಗ್ಗಿಸಿ ಹೇಳಿದೆ, ‘ಭಾಗು ಭಾಗ್ಯಹೀನ! ಭಾಗು, ನಿನ್ನ ಸೇವೆಗೆ ಎಂತಹ ವಿಚಿತ್ರ ಪ್ರತಿಫಲ ಸಿಕ್ಕಿತು, ನೋಡು, ಅಯ್ಯೋ!’

ಭಾಗು ಬಿಕ್ಕಿಬಿಕ್ಕಿ ಅಳತೊಡಗಿದ.

ಭಾಗು ವಿಲವಿಲನೆ ಒದ್ದಾಡುತ್ತಿದ್ದ. ತನ್ನ ಗಂಡು ಮಗುವನ್ನು ಶಾಶ್ವತವಾಗಿ ತನ್ನ ತಾಯಿಯಿಂದ ದೂರಮಾಡಿ, ನನ್ನನ್ನು ಪ್ರೀತಿ ಹಾಗೂ ಗೌರವದಿಂದ ಬೀಳ್ಕೊಟ್ಟ ಆ ದೃಶ್ಯ ಅದೆಷ್ಟು ಮನಕರಗಿಸುವಂತಿತ್ತು.

ಇನ್ನು ಮುಂದೆ ಭಾಗು ಜಗತ್ತಿನ ಯಾವ ವ್ಯಕ್ತಿಗೂ ಸಹಾಯ ಮಾಡುವುದಿಲ್ಲ ಎಂದು ಭಾವಿಸಿದೆ. ಆದರೆ ಮರುದಿನ ಅವನು ಮೊದಲಿಗಿಂತ ಹೆಚ್ಚು ಉತ್ಸಾಹದಿಂದ ರೋಗಿಗಳಿಗೆ ಸಹಾಯ ಮಾಡುವುದನ್ನು ನೋಡಿದೆ. ಅವನು ನೂರಾರು ಮನೆಗಳನ್ನು ಪ್ರಕ್ಷುಬ್ಧತೆಯಿಂದ ರಕ್ಷಿಸಿದ. ಅನೇಕ ಮನೆಗಳ ದೀಪಗಳನ್ನು ಆರಲು ಬಿಡದೆ, ತನ್ನ ಜೀವನವನ್ನು ಒಂದು ಕಿಂಚಿತ್ ಎಂದು ಪರಿಗಣಿಸಿದ. ನಾನು ಸಹ ಭಾಗುವಿನ ಎಲ್ಲ ಸಮಸ್ಯೆಗಳನ್ನು ತುಂಬಾ ಮುತುವರ್ಜಿಯಿಂದ ಬಗೆಹರಿಸುತಿದ್ದೆ. ಉಳಿದಂತೆ, ಕ್ವಾರಂಟೈನ್ ಮತ್ತು ಆಸ್ಪತ್ರೆಗಳ ನಂತರ, ನನ್ನ ಬಿಡುವಿನ ವೇಳೆಯನ್ನು ನಗರದ ಬಡವರ ಮನೆಗಳಲ್ಲಿ ಕಳೆದೆ. ಅವರು ಕೊಳಚೆ ಪ್ರದೇಶಗಳಲ್ಲಿದ್ದುದರಿಂದ ಅಥವಾ ತಪ್ಪು ಚಿಕಿತ್ಸೆಯ ಕಾರಣದಿಂದ ಅವರಿಗೆ ಅನಾರೋಗ್ಯದ ಚಿಹ್ನೆಗಳಿದ್ದರೂ ಸಹ ಅವರಿಗೆ ಚಿಕಿತ್ಸೆ ನೀಡಿದೆ.

ಬರಬರುತ್ತಾ ವೈರಾಣುಗಳು ಕಣ್ಮರೆಯಾಗಿ ವಾತಾವರಣ ಸಂಪೂರ್ಣವಾಗಿ ತಿಳಿಯಾಯಿತು, ನಗರ ಸಂಪೂರ್ಣವಾಗಿ ಸ್ವಚ್ಛವಾಯಿತು. ಇಲಿಗಳ ಹೆಸರು ಮತ್ತು ಗುರುತು ಎರಡೂ ಅಳಿಸಿಹೋಗಿತ್ತು. ನಗರದಲ್ಲಿ ಎಲ್ಲಾದರೊಂದು ಪ್ರಕರಣ ಕಂಡುಬಂದರೆ ತಕ್ಷಣ ಗಮನ ಹರಿಸಿ ಸೂಕ್ತ ಕ್ರಮ ಕೈಗೊಂಡು ರೋಗವನ್ನು ನಿಯಂತ್ರಿಸಲಾಗುತ್ತಿತ್ತು. ಶಾಲಾಕಾಲೇಜುಗಳು ತೆರೆಯಲ್ಪಟ್ಟವು.

ನಾನು ಮಾರುಕಟ್ಟೆಯಿಂದ ಹಾದು ಹೋಗುವಾಗ, ಅಲ್ಲಲ್ಲಿ ಜನರು ನನ್ನನ್ನು ನೋಡಿ ಏನೋ ಮಾತಾಡುತ್ತಿದ್ದಾರೆ ಎಂದು ಬಹಳ ಮುಜುಗರದಿಂದ ಗಮನಿಸಿದೆ. ಜನರು ನನ್ನನ್ನು ಕೃತಜ್ಞತೆಯಿಂದ ನೋಡುತ್ತಿದ್ದರು. ಪತ್ರಿಕೆಗಳಲ್ಲಿ ನನ್ನ ಚಿತ್ರಗಳು ಮತ್ತು ಹೊಗಳಿಕೆಯ ಲೇಖನಗಳು ಪ್ರಕಟವಾದವು. ಹೀಗೆ ಎಲ್ಲ ಕಡೆಗಳಿಂದ ಹೊಗಳಿಕೆಯ ಸುರಿಮಳೆ ಬಂದಿದ್ದರಿಂದ ನನ್ನಲ್ಲಿ ಸ್ವಲ್ಪ ಅಹಂಕಾರ ಹುಟ್ಟಿತು.